ದಿನಾಂಕ : 19.03.2019

ಓ.ಎಸ್. 37/2015

ಪಿ .ಡಬ್ಲು. 1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಹೆಚ್ ಎಂ ರವರಿಂದಃ**

ನನ್ನ ಹೆಚ್ಚುವರಿ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿವೆ.

ಒಂದು ರೀ ಸರ್ವೆ ಟಿಪ್ಪಣಿಯ ನಕಲನ್ನು ನಿ ಪಿ 1 ಎಂದು , ಅದರ ಅನುವಾದವನ್ನು ನಿ ಪಿ 1 (ಎ) ಎಂದು , ದಿಃ 21.10.2002 ರಲ್ಲಿ ಆಗಿತ್ತು ಎನ್ನಲಾದ ಒಂದು ನೊಂದಾಯಿತ ಪಾಲು ವಿಭಾಗದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದರ ಮೂಲ ಪ್ರತಿ ನಮ್ಮ ಬಳಿ ಲಭ್ಯವಿರುವುದಿಲ್ಲ .ಆದ್ದರಿಂದ ಅದನ್ನು ಸಾಬೀತುಪಡಿಸುವ ಷರತ್ತಿನ ಮೇರೆಗೆ ನಿ ಪಿ 2 ಎಂದು , ಅದರ ಅನುವಾದವನ್ನು ನಿ ಪಿ 2 (ಎ) ಎಂದು , ದಿಃ 10.10.1905 ರಲ್ಲಿ ಆಗಿತ್ತು ಎನ್ನಲಾದ ಒಂದು ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದರ ಅನುವಾದನವನ್ನು ಸಲ್ಲಿಸುವ ಷರತ್ತಿನ ಮೇರೆಗೆ ನಿ ಪಿ 3 ಎಂದು , ದಿಃ 16.02.1906 ರಲ್ಲಿ ಆಗಿತ್ತು ಎನ್ನಲಾದ ಒಂದು ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದರ ಅನುವಾದನವನ್ನು ಸಲ್ಲಿಸುವ ಷರತ್ತಿನ ಮೇರೆಗೆ ನಿ ಪಿ 4 ಎಂದು , ದಿಃ 04.11.1943 ರಲ್ಲಿ ಆಗಿತ್ತು ಎನ್ನಲಾದ ಒಂದು ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದರ ಅನುವಾದನವನ್ನು ಸಲ್ಲಿಸುವ ಷರತ್ತಿನ ಮೇರೆಗೆ ನಿ ಪಿ 5 ಎಂದು , ಒಟ್ಟು 23 ಕಂದಾಯ ಪಾವತಿ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ ಪಿ 6 ಎಂದು , ಗುರುತಿಸಲಾಯಿತು. ಒಂದು ಋಣಭಾರ ಪ್ರಮಾಣಪತ್ರದ ದೃಢೀಕೃತ ನಕಲನ್ನ ನಿ ಪಿ 7 ಎಂದು, ದಿ 04.10.1915 ರಲ್ಲಿ ಆಗಿತ್ತು ಎನ್ನಲಾದ ಒಯಿ ಬೋಗ್ಯಪತ್ರದ ದೃಢೀಕೃತ ನಕಲನ್ನು ಅದನ್ನು ಸಾಬೀತುಪಡಿಸುವ ಷರತ್ತಿನ ಮೇರೆಗೆ ನಿ ಪಿ 8 ಎಂದು , ಅದರ ಅನುವಾದವನ್ನು ನಿ ಪಿ 8 (ಎ) ಎಂದು , ದಿಃ 21.12.1923 ರಲ್ಲಿ ಆಗಿತ್ತು ಎನ್ನಲಾದ ಒಂದು ಕ್ರಯಪತ್ರದ ದೃಢೀಕೃತ ನಕಲನ್ನು ಅದನ್ನು ಸಾಬೀತುಪಡಿಸುವ ಷರತ್ತಿನ ಮೇರೆಗೆ ನಿ ಪಿ 9 ಎಂದು , ಅದರ ಅನುವಾದವನ್ನು ನಿ ಪಿ 9 (ಎ) ಎಂದು , ಸರ್ವೆನಂ 7/2 ರ 2 ಆರ್ ಟಿ ಸಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 10 ಮತ್ತು 11 ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**